# ಮದುವೆ ಸಂಭ್ರಮದ ಸುಮಧುರ ನೆನಪು

ಕ್ಯಾಮೆರಾದಿಂದಲೇ ಕಪ್ಪು ಬಿಳುಪಿನ ಛಾಯಾಚಿತ್ರ ತೆಗೆಯುತ್ತಿದ್ದ ಕಾಲವದು. ಇಂದಿನಂತೆ ಕ್ಷಣಕ್ಕೊಂದು ಫೋಟೊ ಮೊಬೈಲ್‌ನಲ್ಲಿ ತೆಗೆಯುವ ಸೌಲಭ್ಯ 50 ವರ್ಷಗಳಷ್ಟು ಹಿಂದೆ ಇರಲೇ ಇಲ್ಲ. ಆಗ ಮದುವೆ ಸಮಾರಂಭದಲ್ಲಿ ತೆಗೆದ ಈ ಫೋಟೊ ನೆನಪಿನ ಬುತ್ತಿಯನ್ನೇ ಮೊಗೆದು ಕೊಡುತ್ತಿದೆ.

■ ಸ್ಮಿತಾ ಮೈಸೂರು



ನೆನಪುಗಳೇ ಹಾಗೆ, ಮನದ ಮೂಲೆಯಲ್ಲಿ ಎಲ್ಲೋ ಮುಚ್ಚಿಟ್ಟುಕೊಂಡು ಒಮ್ಮೆಲೆ ಕಣ್ಮುಂದೆ ಸುಳಿಯುತ್ತವೆ. ಆ ಕ್ಷಣ, ಆ ಘಟನೆ, ಆ ಭಾವಾನುಬಂಧ ಎಲ್ಲವೂ ನೆನಪುಗಳ ಸರಮಾಲೆ ಪೋಣಿಸುತ್ತವೆ. ಇವೆಲ್ಲವನ್ನೂ ಸೆರೆಹಿಡಿದ ಛಾಯಾಚಿತ್ರ ಮಾತ್ರ ಎಷ್ಟು ವರ್ಷ ಕಳೆದರೂ ಆ ನೆನಪುಗಳನ್ನು ಬಿಚ್ಚಿಡುತ್ತಾ ಹೋಗುತ್ತದೆ. ಇವೆಲ್ಲವೂ ಸವಿನೆನಪುಗಳಾಗಿ ಮನದಲ್ಲಿ ಹಚ್ಚ ಹಸುರಾಗಿ ಉಳಿಯುತ್ತವೆ.

ಇದು ನನ್ನ ಕಾಕಾನ ಮಗನ ಮದುವೆಯ ದಿನ ತೆಗೆದ ಈ ಫೋಟೊ, 50 ವರ್ಷಗಳ ಹಿಂದಿನದು, ಆಗೆಲ್ಲ ಮದುವೆ ಎಂದರೆ ನಮಗೆಲ್ಲ ಖುಷಿಯೋ ಖುಷಿ. ಶಾಲೆ ತಪ್ಪಿಸಬಹುದು, ದಿನಾಲೂ ರೊಟ್ಟಿ, ಹುಳಿ ಅನ್ನ ತಿನ್ನುತ್ತಿದ್ದ ನಮಗೆ ಮದುವೆಯಲ್ಲಿ ರುಚಿ ರುಚಿ ಊಟ ತಿನಿಸು ಉಣ್ಣುವ ಆಸೆ. ಚೆನ್ನಾಗಿ ತಿಂದು ಹೊಟ್ಟೆ ಕೆಡಿಸಿಕೊಂಡು, ಸೋಡಾ ಲಿಂಬೆಹಣ್ಣು ಕುಡಿಸುವ ಅಮ್ಮನ ಹತ್ತಿರ ಬೈಗುಳ ತಿಂದದ್ದೇ ನೆನಪು.

ಮದುವೆ ಅಂದರೆ ಜಗಳಗಳು ಇದ್ದದ್ದೇ. ಸರಿಯಾಗಿ ಮರ್ಯಾದೆ ಮಾಡಿಲ್ಲ, ಊಟ ತಿನಿಸು ಸರಿ ನೀಡಿಲ್ಲ. ಸರಿಯಾಗಿ ಬಡಿಸಿಲ್ಲ, ಹುಡುಗನಿಗೆ ವಾಚ್ ಕೊಟ್ಟಿಲ್ಲ, ಒಂದೇ ಎರಡೇ? ಕೆಲವೊಮ್ಮೆ ಜಗಳಕ್ಕೆ ಕಾರಣವೇ ಬೇಕಾಗಿಲ್ಲ. ಅದಕ್ಕೆ ಆಗ ಹೆಣ್ಣಿನ ಮದುವೆ ಅಂದರೆ ಎಲ್ಲರಿಗೂ ಎದೆ ಡವಡವ. ಈಗಿನ ಕಾಲವೇ ಒಳ್ಳೆಯದು. ಇಬ್ಬರೂ ಸಮಾನವಾಗಿ ಮದುವೆಯಲ್ಲಿ ಪಾಲ್ಗೊಳ್ಳುತ್ತಾರೆ.

ನನ್ನ ಕಾಕಾನ ಮಗನ ಮದುವೆ ನಡೆದದ್ದು ಮಹಾರಾಷ್ಟ್ರ ರಾಜ್ಯದ ಕೊಲ್ಹಾಪುರದಲ್ಲಿ. ಸ್ವಲ್ಪ ಶ್ರೀಮಂತರು ಎನ್ನಬಹುದಾದ ಹೆಣ್ಣಿನ ಕಡೆಯವರು ಊಟ ತಿನಿಸುಗಳಿಗೆ ಯಾವ ಕೊರತೆ ಮಾಡದೇ ಮದುವೆ ಮಾಡಿದರು. ನಮಗೆಲ್ಲ ಮತ್ತೊಂದು ಖುಷಿ. ನಮ್ಮನ್ನೆಲ್ಲ ಪ್ರೀತಿಯಿಂದ ಕರೆದು ಸಾಲಾಗಿ ನಿಲ್ಲಿಸಿ (ನಡುವೆ ನಿಂತಿರುವ ಅತ್ಯಂತ ಎತ್ತರದ ಹುಡುಗಿಯೇ ನಾನು) ತೆಗೆದ ಈ ಛಾಯಾಚಿತ್ರ ಹಳೆಯ ಅಲ್ಬಮ್‌ನಲ್ಲಿ ಸಿಕ್ಕಿದಾಗ ಎಷ್ಟೊಂದು ನೆನಪುಗಳನ್ನ ಕಣ್ಣಮುಂದೆ ಬಿಡಿಸಿತು.

ಆಗ ಇದ್ದ ಅನೇಕ ಸಂಬಂಧಿಕರು ಈಗ ಇಲ್ಲ. ಇರುವ ಅನೇಕರು ಸಾಕಷ್ಟು ದೊಡ್ಡವರಾಗಿದ್ದಾರೆ. ಮೊಬೈಲ್‌ನಲ್ಲಿ ಕ್ಷಣ ಕ್ಕೊಮ್ಮೆ ಫೋಟೊ ತೆಗೆಯುವ ಇಂದಿನ ದಿನಗಳಲ್ಲಿ ಇಂಥ ಅಮೂಲ್ಯ ನೆನಪುಗಳು ಅಥವಾ ಒಂದು ಛಾಯಾಚಿತ್ರದ ಹಿಂದಿನ ಕಥೆಗಳು ಸಿಗಲಾರವು. ■